ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮದ ಮಂಡಿಪಲ್ಲಿ, ಕೆರೆ ನೈದಿಲ್‌ಕೆರೆ ಕೂಡಿಸಿದರೆ ಹಾಗೂ ಯಾಗಾಪೂರ ದೊಡ್ಡ ಕೆರೆಯ ದುರಸ್ತಿ ಮಾಡಿದರೆ ಸಾವಿರಾರು ಎಕರೆ ನೀರಾವರಿಯಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇವುಗಳನ್ನು ನಿರ್ಮಾಣ ಮಾಡಿ ಆ ಭಾಗದ ರೈತರಿಗೆ ನೀರಾವರಿ ಅನುಕೂಲ· ಮಾಡಿಕೊಟ್ಟಿಲ್ಲದಿರಲು ಕಾರಣವೇನು?

ಇ) ಈಗಲಾದರೂ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡು ಆ ಭಾಗದ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡುವುದೆ?

ಶ್ರೀ ಎಂ. ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಪ್ರಾಥಮಿಕ ಸಮೀಕ್ಷೆಯ ಪ್ರಕಾರ ಇದು ಕಾರ್ಯಸಾಧುವಲ್ಲವೆಂದು ತಿಳಿದು ಬಂದಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಸವಣೂರು ತಾಲ್ಲೂಕು ಕಳಸೂರು ಬ್ರಿಡ್ಜ ಕಮ್ ಬ್ಯಾರೇಜ್ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 410 (672)

ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ತಾಲ್ಲೂಕು ವರದಾ ನದಿಗೆ ಕಳಸೂರು ಬ್ರಿಡ್ಜ್ ಕಂ ಬ್ಯಾರೇಜ್ ಮಾನ್ಯ ಸಚಿವರಿಂದ ಅಡಿಗಲ್ಲು ಸಮಾರಂಭ ಯಾವಾಗ ಆಯಿತು?

ಆ) ಸದರಿ ಬ್ರಿಡ್ಜ್ ಕಂ ಬ್ಯಾರೇಜ್ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ದಿನಾಂಕ : 19-5-93ರಂದು.

ಆ) ಅಂದಾಜಿಗೆ ಸಕ್ಷಮ ಅನುಮೋದನೆ ದೊರೆತ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ವಿಷಯ : ಬೈಲಹೊಂಗಲ ತಾಲ್ಲೂಕು ನಯನಗರ, ಗರ್ಜುರ್ ಮತ್ತು ಉಡಿಕೇರಿ ಗ್ರಾಮದಲ್ಲಿ ಸ್ಮಶಾನಕ್ಕೆ ಹೋಗುವ ರಸ್ತೆ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 412(737)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭ ಯೋಜನೆಯಡಿಯಲ್ಲಿ ಮುಳುಗಡೆಯಾದ ಪುನರ್ ವಸತಿ ಗ್ರಾಮಗಳಾದ ಬೈಲಹೊಂಗಲ ತಾಲ್ಲೂಕಿನ ನಯನಗರ, ಗರ್ಜುರ್ ಹಾಗೂ ಉಡಿಕೇರಿ ಗ್ರಾಮಗಳ ಸ್ಮಶಾನ ರಸ್ತೆ ಇಲ್ಲದಿರುವುದರಿಂದ ಜನರಿಗೆ ತೊಂದರೆಯಾಗುತ್ತಿರುವ ಈ ಭಾಗ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸ್ಮಶಾನ ರಸ್ತೆ, ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಈ ರಸ್ತೆಗಳನ್ನು ಮಾಡಲಾಗುವುದು

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ನಯಾನಗರದಿಂದ ಸ್ಮಶಾನವು 300 ಮೀ. ಅಂತರದಲ್ಲಿರುತ್ತದೆ. ಸ್ಮಶಾನಕ್ಕೆ ರಸ್ತೆಯನ್ನು ನಿರ್ಮಿಸಲು ಸುಮಾರು 20 ಗುಂಟೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಇದಲ್ಲದೇ ರಸ್ತೆಗಾಗಿ ಏರಿ ನಿರ್ಮಾಣ, ಮುರಂಹೊದಿಕೆ ಗ್ರೇಡ್-1 ಮತ್ತು ಗ್ರೇಡ್-2 ಖಿಂಡೀಕರಣ ಮಾಡುವುದು ಅವಶ್ಯವಿರುತ್ತದೆ. ಇದೆಲ್ಲ ಕೆಲಸಗಳಿಗಾಗಿ ರೂ. 1.20 ಲಕ್ಷ ಅಂದಾಜು ವೆಚ್ಚವಾಗುವುದು.

ಅದರಂತೆ, ಗರ್ಜೂರ ಗ್ರಾಮದಿಂದ ಸ್ಮಶಾನವು 100 ಮೀ ಅಂತರದಲ್ಲಿರುತ್ತದೆ. ಸ್ಮಶಾನಕ್ಕೆ ರಸ್ತೆಯನ್ನು ನಿರ್ಮಿಸಲು ಸುಮಾರು 7-ಗುಂಟೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಇದಲ್ಲದೇ ರಸ್ತೆಗಾಗಿ ಏರಿ ನಿರ್ಮಾಣ, ಮುರಮ್ ಹೊದಿಕೆ, ಗ್ರೇಡ್-1 ಮತ್ತು ಗ್ರೇಡ್-2 ಖಿಡೀಕರಣ ಮಾಡುವುದು ಅವಶ್ಯವಿರುತ್ತದೆ. ಇವೆಲ್ಲ ಕೆಲಸಗಳಿಗಾಗಿ ರೂ. 30,000-00 ಅಂದಾಜು ವೆಚ್ಚವಾಗುವುದು. ಉಡಿಕೇರಿ ಗ್ರಾಮ ಪುನರ್ ವಸತಿ ಕೇಂದ್ರವಲ್ಲ. ಆದ್ದರಿಂದ ಈ ಗ್ರಾಮದ ಸ್ಮಶಾನಕ್ಕೆ ರಸ್ತೆ ನಿರ್ಮಿಸುವ ಗ್ರಾಮದ ಸ್ಮಶಾನಕ್ಕೆ ರಸ್ತೆ ನಿರ್ಮಿಸುವ ಪ್ರಸ್ತಾವನೆ ಇಲ್ಲ.

ಇ) ಈ ರಸ್ತೆಗಳನ್ನು ನಿರ್ಮಿಸಲು ಅನುದಾನದ ಲಭ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.